39

# ರಾಜ ಮತ್ತು ಆತನ ರಾಯಭಾರಿಗಳು

## ಮತ್ತಾಯ 10, ಒಂದು ನಿಕಟ ನೋಟ

ರಾಜ ಮತ್ತು ಆತನ ರಾಜ್ಯದ ಬಗ್ಗೆ ಮತ್ತಾಯನು ಒತ್ತಿ ಹೇಳಿದ್ದಾನೆ.[1] ಅದರಲ್ಲಿರುವ ಪ್ರವಾದನೆ ಹಾಗೂ ಮಹತ್ಕಾರ್ಯಗಳ ದಾಖಲಾತಿಯನ್ನು ಮತ್ತಾಯನು ನೀಡಿರುವನು.

ಮತ್ತಾಯ 9ರ ಅಂತ್ಯದಲ್ಲಿ, ಅರಸನಾದ ಯೇಸುವಿಗೆ ಒಂದು ಕೊರತೆ ಉದ್ಭವಿಸಿತ್ತು. "ಯೇಸು ಎಲ್ಲಾ ಊರುಗಳನ್ನೂ ಹಳ್ಳಿಪಳ್ಳಿಗಳನ್ನೂ ಸುತ್ತಿಕೊಂಡು ಅವರ ಸಭಾಮಂದಿರಗಳಲ್ಲಿ ಉಪದೇಶಮಾಡುತ್ತಾ ಪರಲೋಕರಾಜ್ಯದ ಸುವಾರ್ತೆಯನ್ನು ಸಾರಿ ಹೇಳುತ್ತಾ ಎಲ್ಲಾ ತರದ ರೋಗಗಳನ್ನೂ ಎಲ್ಲಾ ತರದ ಬೇನೆಗಳನ್ನೂ ವಾಸಿಮಾಡುತ್ತಾ ಬಂದನು" (9:35). ಯೇಸುವಿನ ಹೃದಯವು ಅಲ್ಲಿದ್ದ ಜನರ ಗುಂಪಿನ ಕಡೆಗೆ ಸೆಳೆದಿತ್ತು (9:36); ಬೆಳೆಯು ಬಹಳವಾಗಿದ್ದು, ಕೆಲಸಗಾರರು ಸ್ವಲ್ಪವಾಗಿದ್ದಾಗ್ಯೂ (9:37), ಆತನು ಒಬ್ಬನೇ ಆಗಿ ಕಾರ್ಯನಿರ್ವಹಿಸಿದೆ ಶುಭ ಸಂದೇಶವನು ಸಾರುವ ಸಲುವಾಗಿ, ವಿಶೇಷವಾದ ಹನ್ನೆರಡು ಸಂದೇಶಕರನ್ನು ಆಯ್ದುಕೊಂಡನು (10:2-4).[2]

ಯೇಸು ಅಪೊಸ್ತಲರನ್ನು ಗಲಿಲಾಯದಲ್ಲಿ ಸುವಾರ್ತೆ ಸಾರಲು ಕಳುಹಿಸಿದ ವಿಚಾರವನ್ನು ಮತ್ತಾಯ 10ರಲ್ಲಿ ತಿಳಿಸಲಾಗಿದೆ. ಯೇಸು ನೀಡಿರುವ ಸಲಹೆಗಳನ್ನು ಅದರಲ್ಲಿ ನೀಡಲಾಗಿದೆ (ಮತ್ತಾಯ 10:5; 11:1). ಸಲಹೆಗಳು, ಆ ನಿಖರವಾದ ಪ್ರಯಾಣಕ್ಕೆ ಸಂಬಂಧಿಸಿರುತ್ತದೆ. ಉದಾಹರಣೆಗೆ ಅವರು ಯೆಹೂದ್ಯರನ್ನು ಹೊರತು ಪಡಿಸಿ, ಅನ್ಯರ ಅಥವಾ ಸಮಾರ್ಯರ ಬಳಿಗೆ ಹೋಗಬಾರದಿತ್ತು (10:5, 6).

ಹತ್ತಿರದಿಂದ ಗಮನಿಸುವದಾದರೆ, ಆತನು ಪರಲೋಕಕ್ಕೆ ಏರಿ ಹೋದನಂತರ, ಆತನ ಸೇವೆಯನ್ನು ಅವರು ಮುಂದುವರೆಸುವಂಥ ಕಾರ್ಯಕ್ಕಾಗಿ ಕತ್ತನು ಅವರನ್ನು ಅಣಿ ಮಾಡುತ್ತಿದ್ದನು. ಅವರು ಆತನ ನಿಮಿತ್ತವಾಗಿ, ಅಧಿಪತಿಗಳ, ಅರಸುಗಳ ಮುಂದಕ್ಕೂ ಕೊಂದು ಹೋಗುವವರು ಎಂದು ತಿಳಿಸಿದ್ದನು. "ಹೀಗೆ ಅವರಿಗೂ ಅನ್ಯ ಜನಗಳಿಗೂ ಸಾಕ್ಷಿಯಾಗುವರು" (ವಚನ 18). ಅವರ ಈ ಸಮಯದಲ್ಲಿ ಆ ಪ್ರವಾದನೆಯು ನೆರವೇರದೆ, ಅಪೊಸ್ತಲರ ಕೃತ್ಯಗಳ ಕಾಲದಲ್ಲಿ ನೆರವೇರಿತು (ಅಧ್ಯಾಯ 23 ರಿಂದ 26 ನೋಡಿ). ಯೇಸುವಿನ ಸಲಹೆಯ ತಕ್ಷಣದ ಸಾವಾಲಾಗಿರದೆ, ನಂತರದ ಸೇವೆಗೆ ಅನುಕೂಲವಾಗಿತ್ತು.

ಅಧ್ಯಾಯ 10ರಲ್ಲಿ ನಮಗೆ ನಮಗೆ ಪಾಠವಿದೆ. ಪೂರ್ತಿ ಅಧ್ಯಾಯವನ್ನು ಈಗಿನ ಪ್ರಸಂಗದಲ್ಲಿ ನಾನು ತಿಳಿಸಲು ಅಸಾಧ್ಯವಾಗಿದೆ. ಈಗಿನ ರಾಯಭಾರಿಗಳಿಗೆ, ಆಗಿನ ರಾಯಭಾರಿಗಳಿಂದ ವರ್ಗಾವಣೆಯಾದ ಕೆಲವು ಆಲೋಚನೆಗಳನ್ನು ತಿಳಿಸುತ್ತೇನೆ.

### ಹಿಂದಿನ ರಾಯಭಾರಿಗಳು

ಹಿಂದಿನರಾಯಭಾರಿಗಳು: ಯೇಸು ಕ್ರಿಸ್ತನ ಕಾಲದಲ್ಲಿದ ರಾಯಬಾರಿಗಳು ಮಾತ್ರ[3] ಅವರನ್ನು "ಅಪೊಸ್ತಲರೆಂದು" ಕರೆದರು (ವಚನ 2). "ಕಳುಹಿಸಲ್ಪಟ್ಟವನು" ಗ್ರೀಕ್ ಭಾಷೆಯ ಅರ್ಥ. ಕಳುಹಿಸಲ್ಪಟ್ಟವರಿಗಾಗಿ ಸಹಜವಾಗಿ ಬಳಸಲ್ಪಡುವ ಪದ ಮುಖ್ಯವಾಗಿ "ಕರ್ತನಿಂದ ಕಳುಹಿಸಲ್ಪಟ್ಟವರು" (2 ಕೊರಿಂಥ 8:23; ಫಿಲಿಪ್ಪಿ 2:25), ಈ ಹನ್ನೆರಡು ಜನರು ವಿಶೇಷವಾದ, ಹಾಗೂ ನಿರ್ದಿಷ್ಟವಾದ ಶಿಕ್ಷಣವನ್ನು ಪಡೆದಿದ್ದರು (ನೋಡಿ ಅಪೊಸ್ತಲರ ಕೃತ್ಯಗಳು 1:21, 22; 1 ಕೊರಿಂಥ 9:1; ಎಫೆಸ 4:11). ಅದು ಒಂದು ನಿರಂತರವಾದ

ಸ್ಥಾನವಾಗಿದ್ದು, ಮುಂದಿನ ಪೀಳಿಗೆಗೆ ವರ್ಗಾವಣೆ ಮಾಡಬಹುದಾದ ಸಂಗತಿಯಾಗಿರಲಿಲ್ಲ.[4] 2-4ನೇ ವಚನಗಳಲ್ಲಿ ಈ ವಿಶೇಷವಾದ ರಾಯಭಾರಿಗಳ ಬಗ್ಗೆ ತಿಳಿಸಲಾಗಿದೆ:

> ಆತನು ಕಳುಹಿಸಿಕೊಟ್ಟ ಅಪೊಸ್ತಲರೆಂಬ ಹನ್ನೆರಡು ಮಂದಿಯ ಹೆಸರುಗಳು ಯಾವವಂದರೆ - ಮೊದಲನೆಯವನು ಪೇತ್ರನೆನಿಸಿಕೊಳ್ಳುವ ಸೀಮೋನ, ಅವನ ತಮ್ಮನಾದ ಆಂದ್ರೆಯ, ಜೆಬೆದಾಯನ ಮಗನಾದ ಯಾಕೋಬ, ಅವನ ತಮ್ಮನಾದ ಯೋಹಾನ, ಫಿಲಿಪ್ಪಿ, ಬಾತೋಲೊಮಾಯ, ತೋಮ, ಸುಂಕದ ಮತ್ತಾಯ, ಅಲ್ಫಾಯನ ಮಗನಾದ ಯಾಕೋಬ, ತದ್ದಾಯ ಮತಾಭಿಮಾನಿ ಎಂದು ಹೆಸರಿಗೊಂಡ ಸೀಮೋನ ಯೇಸುವನ್ನು ಹಿಡಿದುಕೊಟ್ಟ ಇಸ್ಕರಿಯೋತ ಯೂದ, ಇವುಗಳೇ.

ಈ ಪಟ್ಟಿಯಲ್ಲಿ ಎರಡು ಗನಾರ್ಹ ಸಂಗತಿಗಳಿವೆ. (1) ಪ್ರಪಂಚದ ದೃಷ್ಟಿಯಲ್ಲಿ ಇವರು ಸಾಧಾರಣ ಮನುಷ್ಯರಾಗಿದ್ದರು. ಅವರು ವಿಶೇಷವಾದ ತರಬೇತಿಯನ್ನಾಗಲೀ, ವಿಶಾಷ ವರದಾನಗಳನ್ನಾಗಲೀ ಹೊಂದಿದರಲ್ಲ. ಸಾಧಾರಣರಾದವರು, ಅಸಾಧಾರಣವಾದ ಕಾರ್ಯಕ್ಕಾಗಿ ಕರೆಯಲ್ಪಟ್ಟವರು. ದೇವರು ಯಾರನ್ನಾದರೂ, ಎಲ್ಲರನ್ನಾದರೂ ಉಪಯೋಗಿ ಸುವನು. (2) ಇತರೆ ದೃಷ್ಟಿಯಲ್ಲಿ, ಇದು ಒಂದು ವಿಚಿತ್ರವಾದ ಮಿಶ್ರಣ ಉದಾಹರಣೆಗೆ ಮತ್ತಾಯನು ಮತಾಭಿಮಾನಿಯಾದ ಸೀಮೋನನ ಸಂಗಡ, ರೋಮಾಯರಿಗಾಗಿ ತೆರಿಗೆ ವಸೂಲಿ ಮಾಡುತ್ತಿದ್ದನು. ಮತಾವಲಂಭಿಗಳು, ರಾಷ್ಟ್ರೀಯ ಮನೋಭಾವ ಹೊಂದಿದ ಭಯೋತ್ಪಾದಕರಾಗಿದ್ದರು.[5] ಅವರು ಯೇಸುವನ್ನು ಸಂಧಿಸುವ ಮೊದಲು ಮತ್ತಾಯನಿಗೆ ಚೂರಿಯಿಂದ ಚುಚ್ಚಿರಬಹುದು - ಆದರೆ ಎಲ್ಲರೂ ಸಮಾಧಾನದಿಂದ ಬದುಕುವಂತೆ ಕರ್ತನು ಸಹಾಯಿಸುತ್ತಾನೆ.

ಅವರು ವಿಶೇಷ ವ್ಯಕ್ತಿಗಳಾಗಿದ್ದರೆಂದು ತಿಳಿದು, ಮತ್ತಾಯ 10 ನಮಗೂ ಅನ್ವಯಿಸುತ್ತದೆ ಎಂದು ಭಾವಿಸಬಾರದು.

**ವಿಶೇಷ ಯೋಗ್ಯತೆಗಳು (ವಚನಗಳು 1, 8)**

ಅಪೊಸ್ತಲರು ವಿಶೇಷ ಯೋಗ್ಯತೆಗಳನ್ನು ಹೊಂದಿದ್ದರು (ನೋಡಿ ಅಪೊಸ್ತಲರ ಕೃತ್ಯಗಳು 2:43; 2 ಕೊರಿಂಥ 12:12; ಇಬ್ರಿಯ 2:1-4). ದೆವ್ವಗಳನ್ನು ಬಿಡಿಸುವ, ರೋಗ ನಿವಾರಣಾ, ಹಾಗೂ ಸತ್ತವರನ್ನು ಎಬ್ಬಿಸುವ ಅಧಿಕಾರವನ್ನು ಹೊಂದಿದ್ದರ (ಮತ್ತಾಯ 10:1, 8). ಯೇಸು ಮೊದಲ ಸಾರಿ ತನ್ನ ಅದ್ಭುತ ಮಾಡುವ ಶಕ್ತಿಯನ್ನು ಬಳಸಿದ್ದನು. ಯಾರಿಗಾದರು ದೇವರು ಒಂದು ಕಾರ್ಯವನ್ನು ನೀಡಿದರೆ, ಅದರ ಅಗತ್ಯಗಳನ್ನು ಪೂರೈಸುತ್ತಾನೆ.

ಆ ಹನ್ನೆರಡು ಜನರು ಹೊಂದಿದ್ದ ಶಕ್ತಿಯನ್ನೇ ನಾವುಗಳು ಪಡೆದಿರುವದಿಲ್ಲ. ಆದರೆ ನಿಯಾಮಾವಳಿ ಒಂದೇ ಆಗಿದೆ: ನಮಗಿರುವ ಅಗತ್ಯತೆಗಳನ್ನೂ ದೇವರು ನೀಡುತ್ತೇನೆ.

**ವಿಶೇಷ ಸಮರ್ಪಣೆ (ವಚನಗಳು 5-7)**

ಅಪೊಸ್ತಲರು ಹೊಂದಿದ ಸೇವೆ, ಅದು ಮಿತಿಗೆ ಒಳಪಟ್ಟಿತ್ತು. ಅವರು ಯೆಹೂದ್ಯರ ಬಳಿಗೆ ಮಾತ್ರ ಹೋಗಬೇಕಿತ್ತು, ಅನ್ಯರ ಅಥವಾ ಸಮಾರ್ಯರ ಬಳಿಗೆ ಹೋಗಬಾರದಿತ್ತು (ವಚನಗಳು 5, 6). "ದೇವರ ರಾಜ್ಯ ಸಮೀಪವಾಗಿದೆ" ಎಂಬ ಒಂದೇ ಸಂದೇಶವನ್ನು ಅದು ಒಳಗೊಂಡಿತ್ತು (ವಚನ 7) ಮುಂದೆ ಬರಲಿರುವ ರಾಜ್ಯಕ್ಕಾಗಿ ಮಾನಸಾಂತರ ಪಡಿಸಿ ಎಂದು ಪ್ರಸಂಗಿಸಿದರು (ಮಾರ್ಕ 6:12; ನೋಡಿ ಮತ್ತಾಯ 3:2; 4:17).

ನಮ್ಮ ಕರೆಯು ಭಿನ್ನವಾಗಿದೆ; ಅದನ್ನು ನಾವು "ಮಹಾ ಆದೇಶ" (ಮತ್ತಾಯ 28:18-20; ಮಾರ್ಕ 16:15, 16). ಅದು ಮಿತಿಗೆ ಒಳಪಟ್ಟಿರುವದಿಲ್ಲ. ನಾವು ಲೋಕಕಕ್ಕೆ ಹೋಗಬೇಕಿದೆ (ಮತ್ತಾಯ 28:19; ಮಾರ್ಕ 16:15). ಅದರಲ್ಲಿನ ಸಂದೇಶವು ವಿಸ್ತಾರವಾಗಿದೆ: ಪೂರ್ಣ

ಸುವಾರ್ತೆಯನ್ನು ಸಾರಬೇಕು. ಯೇಸು ಬಂದಿದ್ದಾನೆ, ಆತನ ರಾಜ್ಯವಾದ/ಸಭೆಯು ಸ್ಥಾಪನೆಯಾಗಿದೆ ಎಲ್ಲರೂ ಬರಬಹುದು ಎಂದು ಹೇಳಬೇಕಿದೆ!

**ಅವರಿಗೆ ನೀಡಲಾದ ವಿಶೇಷ ಮಾರ್ಗದರ್ಶನ (ವಚನಗಳು 9-16)**

ಅಪೊಸ್ತಲರಿಗೆ ವಿಶೇಷವಾದ ಮಾರ್ಗದರ್ಶನ ಉಂಟಾಯಿತು. ಅವರ ಪ್ರಯಾಣವ ಸರಳವಾಗಿತ್ತು (ಮತ್ತಾಯ 10:9, 10) ಮತ್ತು ಅತಿಥಿ ಸತ್ಕಾರ ನೀಡುವವರ ಮನೆಯಲ್ಲಿ ಇಳುಕೊಳ್ಳಬೇಕಿತ್ತು (ವಚನಗಳು 11-13ಎ). ಸ್ವೀಕರಿಸದವನ ನಡುವೆ ಸಮಯ ವ್ಯರ್ಥಮಾಡಬಾರದಿತ್ತು, ಅವರನ್ನು ಬಿಟ್ಟು ಮುಂದಕ್ಕೆ ಹೋಗ ಬೇಕು (ವಚನ 13ಬಿ-15). ಬೋಧಿಸುವಾದ ತಿಳುವಳಿಕೆ ಇರಬೇಕು (ವಚನ 16ಬಿ).

ಈ ಮಾರ್ಗದರ್ಶನ ಅವರಿಗೆ ನೀಡಿದ್ದರೆ, ಅಂತಹ ಪಾಠಗಳುನಮಗೂ ಅಗತ್ಯವಿದೆ. ನಮ್ಮ ಅಗತ್ಯಗಳಿಗಾಗಿ ಆತನಲ್ಲಿ ಭರವಸವಿಡಬೇಕು. ತುರ್ತಿನ ಅಗತ್ಯತೆಯನ್ನು ಅರಿಯ ಬೇಕು. ಕರ್ತನ ಕಾರ್ಯಗಳನ್ನು ಮಾಡುವ ವಿಚಾರದಲ್ಲಿ ಸರಿಯಾದ ನಿರ್ಣಯಗಳನ್ನು ತೆಗೆದುಕೊಳ್ಳಬೇಕು.

**ಅವರಿಗೆ ಒದಗಿದ ಪ್ರೋತ್ಸಾಹ (ವಚನಗಳು 19, 20, 40-42)**

ಅಂತಿಮವಾಗಿ,ಅವರು ವಿಶೇಷ ಪ್ರೋತ್ಸಾಹ ದೊರೆಯಿತು; ಅವರ ವಿಚಾರಣೆಗೆ ಒಳಪಟ್ಟಾಗ, ಪವಿತ್ರಾತ್ಮನ ಸಹಾಯ ದೊರೆಯುವು ಎಂಬ ವಿಚಾರದಲ್ಲಿ ಪ್ರೋತ್ಸಾಹಗೊಂಡರು (ವಚನಗಳು 19, 20). ಬರ್ಟನ್ ಕಾಫ್‌ಮನ್ ಹೇಳಿದಂತೆ, "ಈ ವಿಶೇಷವಾದ ಹೇಳಿಕೆಯು ಅಪೊಸ್ತಲರನ್ನು ಹೊಸ ಒಡಂಬಡಿಕೆಯ ಸತ್ಯಗಳಗೆ ಪ್ರೇರಿತವಾದ ಮಾರ್ಗದರ್ಶನವನ್ನು ನೀಡಿತು."[6] ಈ ಹೇಳಿಕೆಯ ಪ್ರಕಾರ "ಇತರರಿಗೆ ಉತ್ತರ ನೀಡುವಂಥ" ಅಧ್ಯಯನವನ್ನು ನಾವುಗಳು ಮಾಡಬೇಕು (1 ಪೇತ್ರ 3:15; KJV).

ಅವರು ಕ್ರಿಸ್ತನನ್ನು ಪ್ರತಿನಿದಿಸುವ ಪ್ರತಿನಿಧಿಗಳಾಗಿದ್ದರು ಎಂಬ ವಿಚಾರದ ನಿಮಿತ್ತ ಪ್ರೋತ್ಸಾಹ ಪಡೆದರು. ಅವರನ್ನು ಸ್ವೀಕರಿಸಿದವರು, ಯೇಸುವನ್ನೇ ಸ್ವೀಕರಿಸುವವ ರಾಗಿದ್ದರು (ವಚನಗಳು 40-42).[7] ಒಬ್ಬ ಅರಸನಿಂದ ಅಥವಾ ದೇಶದ ಅಧ್ಯಕ್ಷನಿಂದ ರಾಯ ಭಾರಿಗಳಾಗಿ ನೇಮಿಸಲ್ಪಡುವ ಬಹು ಗೌರವದ ಸಂಗತಿಯಾಗಿರುತ್ತದೆ. ಅರಸರ ಅರಸನ, ರಾಜಾಧಿರಾಜನ ರಾಯಭಾರಿಗಳಾಗುವದು ವಿಶೇಷವಲ್ಲವೇ (ಪ್ರಕಟಣೆ 19:16)!

ಯೇಸುವಿನ ಅಪೊಸ್ತಲರು *ವಿಶೇಷ* ರಾಯಭಾರಿಗಳಾಗಿದ್ದರು. ಅವರಿಗೆ ಮೀಸಲಾದ ಸಲಹೆಗಳು ನಮಗೆ (ಅವರು ಹೇಳಿದ ಹೇಳಿಕೆಗಳು) ಅನ್ವಯಿಸುವದಿಲ್ಲ.

## ವರ್ತಮಾನದ ರಾಯಭರಿಗಳು

ವರ್ತಮಾನ ಕಾಲದ ರಾಯಭಾರಿಗಳ ಕುರಿತಾಗಿಯು, ಈ ಪಾಠದಲ್ಲಿ ನೀಡಲಾಗಿದೆ. ಯೇಸುವಿನ ದಿನನಿತ್ಯದ ರಾಯಭಾರಿಗಳು ಅಪೊಸ್ತಲರ ತರಹದ ರಾಯಭಾರಿಗಳು ನಾವಾಗಿರದೆ, ಇದ್ದರು, ಈ ಲೋಕದಲ್ಲಿ ಯೇಸುವನ್ನು ನಾವುಗಳು ಪ್ರತಿನಿಧಿಸುತ್ತೇವೆ. ಪೌಲನು ಕೊರಿಂಥವರಿಗೆ ಬರೆದು:

> ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನುತನಸೃಷ್ಟಿಯಾದನು. ಇಗೋ, ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು. ಇದೆಲ್ಲಾ ದೇವರಿಂದಲೇ ಉಂಟಾದದ್ದು. ಆತನು ಕ್ರಿಸ್ತನ ಮೂಲಕ ನಮ್ಮನ್ನು ತನಗೆ ಸಮಾಧಾನಪಡಿಸಿಕೊಂಡು ಸಮಾಧಾನ ವಿಷವಾದ ಸೇವೆಯನ್ನು ನಮಗೆ ಅನುಗ್ರಹಿಸಿದ್ದಾನೆ; ಆ ಸಮಾಧಾನ ವಾಕ್ಯವೇನಂದರೆ ದೇವರು ಮನುಷ್ಯರ ಅಪರಾಧಗಳನ್ನು ಅವರ ಲೆಕ್ಕಕ್ಕೆ ಹಾಕದೆ ಲೋಕವನ್ನು ಕ್ರಿಸ್ತನಲ್ಲಿ ತನಗೆ ಸಮಾಧಾನಪಡಿಸಿಕೊಳ್ಳುತ್ತಿದ್ದನೆಂಬುದೇ. ಅದನ್ನು ಸಾರುವ ಸೇವೆಗೆ ನಮ್ಮನ್ನು

ನೇಮಿಸಿದ್ದಾನೆ.

> ನಾವು ಕ್ರಿಸ್ತನ ರಾಯಭಾರಿಗಳಾಗಿದ್ದೇವೆ, ದೇವರೇ ನಮ್ಮ ಮೂಲಕ ಬುದ್ಧಿ ಹೇಳುವ ಹಾಗಾಯಿತು. ದೇವರೊಂದಿಗೆ ಸಮಾಧಾನವಾಗಿರೆಂದು ಕ್ರಿಸ್ತನ ಹೆಸರಿನಲ್ಲಿ ನಿಮ್ಮನ್ನು ಬೇಡಿಕೊಳ್ಳುತ್ತೇವೆ (2 ಕೊರಿಂಥ 5:17-20).

ಪೌಲನು ತನ್ನ ಸೇವೆಯ ಕುರಿತ ವ್ಯಾಖ್ಯಾನವನ್ನು ಮಾಡಿದ್ದರೂ, ಸಭೆಗಳು ಸಹ ಅದೇ ವಿಧವಾದ ಸೇವೆಯ ಕುರಿತ ಸೂಚನೆಗಳಿವೆ - ಮನುಷ್ಯರನ್ನು ದೇವರೊಂದಿಗೆ ಸಂಧಾನ ಪಡಿಸುವ ಜವಾಬ್ದಾರಿಯನ್ನು ಪ್ರತಿಯೊಬ್ಬ ಕ್ರೈಸ್ತನು ಹೊಂದಿದ್ದಾರೆ.

"ಕ್ರಿಸ್ತನ ಪರವಾಗಿ" ನಾವು ಮಾಡುತ್ತೇವೆ. ನಂಬಿಗಸ್ತರಾದ ಕ್ರೈಸ್ತರು "ಈ ಲೋಕದ ಪ್ರತಿನಿಧಿಗಳು" ಎಂದು ಅನೇಕ ವ್ಯಾಖ್ಯಾನಗಳು ತಿಳಿಸುತ್ತೇವೆ. ಕ್ರಿಸ್ತನನ್ನು ಆತನ ಅನುಯಾಯಿಗಳನ್ನು ಪ್ರತ್ಯೇಕ ಮಾಡುವದು ಅಸಾಧ್ಯ ಎಂದು ಹೊಸ ಒಡಂಬಡಿಕೆಯು ಹೇಳುತ್ತದೆ. ಯೇಸುವಿನ ಹೆಸರಿನಲ್ಲಿ ಒಬ್ಬನು ಆತನ ಶಿಷ್ಯರಿಗೆ ಒಂದು ತಂಬಿಗೆ ನೀರನ್ನು ನೀಡುವದಾದರೆ, ಅದು ಯೇಸುವಿಗೆ ಸಲ್ಲಿಸಿದ ಸೇವೆಯಾಗಿದೆ (ಮತ್ತಾಯ 10:42; ನೋಡಿ 25:35, 40). ಪೌಲನು ಸಭೆಯನ್ನು ಹಿಂಸಿಸಿದಾಗ (ಅಪೊಸ್ತಲರ ಕೃತ್ಯಗಳು 8:3), ಅವನು ಕ್ರಿಸ್ತನನ್ನೇ ಹಿಂಸಿಸುತ್ತಿದ್ದನು (ಅಪೊಸ್ತಲರ ಕೃತ್ಯಗಳು 9:4).

ನಾವು ಆತನನ್ನು ಸೇರಿಕೊಳ್ಳಲು ದೀಕ್ಷಾಸ್ನಾನ ಮಾಡಿಸಿಕೊಂಡಿದ್ದೇವೆ (1 ಕೊರಿಂಥ 12:13), ಅದು ಪೂರ್ಣವಾದ ಸಭೆಯಾಗಿದೆ (ಎಫೆಸ 1:22, 23). "ದೀಕ್ಷಾಸ್ನಾನದಿಂದ ಕರ್ತನನ್ನು ಧರಿಸಿ ಕೊಳ್ಳುತ್ತೇವೆ" (ನೋಡಿ ಗಲಾತ್ಯ 3:27). ಆತನು ನಮ್ಮಲ್ಲೂ ನಾವು ಆತನಲ್ಲೂ ಇದ್ದೇವೆ (ರೋಮಾಪುರ 8:1; ಕೊಲಸ್ಸೆ 1:27). ಆದ್ದರಿಂದ ನಾವೆಲ್ಲರೂ, "ಇನ್ನೂ ಜೀವಿಸುವವನು ನಾನಲ್ಲ, ಕ್ರಿಸ್ತನು ನನ್ನಲ್ಲಿ ಜೀವಿಸುತ್ತಾನೆ" ಎಂದು ಹೇಳುತ್ತೇವೆ (ಗಲಾತ್ಯ 2:20).

ವಿಲಿಯಮ್ ಬಾರ್ಕ್ಲೆಯವರು ಬರೆದು: "ಕ್ರೈಸ್ತನು ಮನುಷ್ಯರಿಗಾಗಿ ದೇವರಿಂದ ನೇಮಿಸಲ್ಪಟ್ಟ ರಾಯಭಾರಿಯಾಗಿದ್ದೇನೆ. ತನ್ನ ಯಜಮಾನನ ಸನ್ನಿಧಿಯಲ್ಲಿ ಪಡೆದ ವಾಕ್ಯ ಮತ್ತು ಸೌಂದರ್ಯವನ್ನು ತೆಗೆದುಕೊಂಡು ಮುಂದೆ ಹೋಗುತ್ತಾನೆ."[8] ಆತ ಆ ದೇಶವನ್ನು ಪಡೆದ ರಾಯಭಾರಿಗಳಿಗೆ ಆತನ ಸಂದೇಶ ಸಾರುವವರು! ಎಂದು ಈ ಹಿಂದೆ ಚರ್ಚಿಸಿದ್ದೇವೆ (ಮತ್ತಾಯ 28:18-20; ಮಾರ್ಕ 16:15, 16). ಈ ವಿಚಾರವನ್ನು ತಿಳಿದ ನಂತರ, ವರ್ತಮಾನದ ರಾಯಭಾರಿಗಳಿಗೆ ಸಂಬಂಧಪಟ್ಟ ಸತ್ಯಗಳನ್ನು ಅರಿಯುವ ವಿಚಾರಕ್ಕೆ ಹೋಗೋಣ.

### ಜೀವಿಸಲು ಒಂದು ಜೀವನ (ವಚನಗಳು 28, 32, 33, 37-39)

ಕ್ರಿಸ್ತನ ರಾಯಭಾರಿಗಳಾದ ನಾವುಗಳು ಯೋಗ್ಯವಾದ ಜೀವನವನ್ನು ಜೀವಿಸಬೇಕು. ಯಾಕಂದರೆ ನಾವುಗಳು ಅರಸನ ಪ್ರತಿನಿಧಿಗಳಾಗಿದ್ದೇವೆ!

ಈ ಜೀವನ ದೈವೀಕ ಭಯವನ್ನು ಹೊಂದಿರಬೇಕು. ಯೇಸುಹೇಳಿದಂತೆ, "ಇದಲ್ಲದ ದೇಹವನ್ನು ಕೊಂದು ಆತ್ಮವನ್ನು ಕೊಲ್ಲಲಾರದವರಿಗೆ ಹೆದರಬೇಡಿರಿ, ಆತ್ಮ ದೇಹ ಎರಡನ್ನೂ ಕೂಡ ನರಕದಲ್ಲಿ ಹಾಕಿ ನಾಶಮಾಡಬಲ್ಲಾತನಿಗೆ ಹೆದರಿರಿ" (ಮತ್ತಾಯ 10:28).

ಇದರ ಅರ್ಥ ಧೈರ್ಯವಾಗಿ ವಾಕ್ಯಸಾರುವ ಕುರಿತಾಗಿದೆ "ಹಾಗದರೆ ಯಾವನು *ಮನುಷ್ಯರ ಮುಂದೆ ತಾನು ಯೇಸುವಿನವನೆಂದು* ಒಪ್ಪಿಕೊಳ್ಳುವನೋ, ನಾನು ಸಹ ಅವನನ್ನು ನನ್ನವನೆಂದು ಪರಲೋಕದಲ್ಲಿರುವ ನನ್ನ ತಂದೆಯ ಮುಂದೆ ಒಪ್ಪಿಕೊಳ್ಳುವೆನು. ಆದರೆ ಯಾವನು ಮನುಷ್ಯರ ಮುಂದೆ ತಾನು ಯೇಸುವಿನವನಲ್ಲವೆಂದು ಹೇಳುವನೋ ಅವನನ್ನು ನಾನು ಸಹ ಪರಲೋಕದಲ್ಲಿರುವ ನನ್ನ ತಂದೆಯ ಮುಂದೆ ನನ್ನವನಲ್ಲವೆಂದು ಹೇಳುವೆನು" (ವಚನಗಳು 32, 33). ವಾಕ್ಯದ ಮುಖಾಂತರ ನಾವು ಒಪ್ಪಿಕೊಳ್ಳಬೇಕು. "ಮಾನವಿರುವ

ಹಲವಾರು ಜನರು, ವಾಕ್ಯದ ಶಬ್ಧವನ್ನು ಮಾಡದೆ ಇರುವದು ಯೇಸುವನ್ನು ತಿರಸ್ಕರಿಸಿದಂತೆ'' ಎಂದು ಬಾರ್ಕ್ಲೆಯವರು ಹೇಳಿರುವರು.[9] ಕಾರ್ಯದಲ್ಲೂ ಆತನನ್ನು ಒಪ್ಪಿಕೊಳ್ಳಬೇಕು (ನೋಡಿ ತೀತ 1:16). ಅಮೇರಿಕದ ಅಧ್ಯಕ್ಷರು ಗೌಪ್ಯ ಸೇವೆಯನ್ನು[10] ಹೊಂದಿರಬಹುದು. ಆದರೆ ಯೇಸು ಅಂಥಹ ಸೇವೆಯನ್ನು ಹೊಂದಿರುವದಿಲ್ಲ. ನಾವು ಅರಸನ ದಾಸರೆಂದು ಬಹಿರಂಗವಾಗಿ ಅರಿಕೆ ಮಾಡಬೇಕು!

*ಜೀವಿತವು ಸರಿಯಾದ ಅದ್ಭುತಗಳನ್ನು* ಹೊಂದಿರಬೇಕು. ದೇವರು/ಯೇಸುವಿನ ರಾಜ್ಯಕ್ಕೆ ಪ್ರಥಮ ಸ್ಥಾನ ನೀಡಬೇಕು. ಅದು ನಮ್ಮ ಕುಟುಂಬಗಳಿಗಿಂತಲೂ ಮಹತ್ವವುಳ್ಳದ್ದು. ''ತಂದೆಯ ಮೇಲಾಗಲಿ ತಾಯಿಯ ಮೇಲಾಗಲಿ ನನ್ನ ಮೇಲೆ ಇಡುವದಕ್ಕಿಂತ ಹೆಚ್ಚಾದ ಮಮತೆಯನ್ನಿಡುವವನು ನನಗೆ ಯೋಗ್ಯನಲ್ಲ; ಮಗನ ಮೇಲಾಗಲಿ ಮಗಳ ಮೇಲಾಗಲಿ ನನ್ನ ಮೇಲೆ ಇಡುವದಕ್ಕಿಂತ ಹೆಚ್ಚಾದ ಮಮತೆಯನ್ನಿಡುವವನು ನನಗೆ ಯೋಗ್ಯನಲ್ಲ'' (ವಚನ 37).[11] ದೇವರ ರಾಜ್ಯವು ನಮ್ಮ ಜೀವಿತಕ್ಕಿಂತಲೂ ಶ್ರೇಷ್ಟವಾದದ್ದು ''ನನ್ನ ನಿಮಿತ್ತವಾಗಿ ತನ್ನ ಪ್ರಾಣವನ್ನು ಕಳಕೊಂಡವನು ಅದನ್ನು ಕಂಡುಕೊಳ್ಳುವನು'' (ವಚನ 39ಬಿ). ರೋಮಾಯರಿಂದ ಹಿಂದೆ ಅನುಭವಿಸಿ ಆದಿ ಕ್ರೈಸ್ತರಿಗೆ ಇದು ಒಂದು ವಿಶೇಷವಾದ ವಾಗ್ದಾನ ವಾಯಿತು!

*ಸ್ವಾರ್ಥವನ್ನು* ನಿರಾಕರಿಸಿದ ಗುಣವುಳ್ಳದ್ದಾಗಿರಬೇಕು. ''ತನ್ನ ಶಿಲುಬೆಯನ್ನು ತೆಗೆದುಕೊಂಡು ನನ್ನ ಹಿಂದೆ ಬಂದ ಹೊರತು ನನಗೆ ಯೋಗ್ಯನಲ್ಲ'' (ವಚನ 38). ''ಶಿಲುಬೆಯ ಕುರಿತು'' ಮತ್ತಾಯನ ಈ ಭಾಗದಲ್ಲಿ ಪ್ರಥಮ ದಾಖಲೆ ಮಾಡಲಾಗಿದೆ. ನಂತರದಲ್ಲಿ ಯೇಸು ತಾನೇ ತನ್ನ ಶಿಲುಬೆಯನ್ನು ಹೊತ್ತುಕೊಂಡು ಹೋದನು. ನಾವು ಸಹ ಆತನನ್ನೇ ಅನುಸರಿಸಬೇಕು.

### ಸಹಿಸಬೇಕಾದ ಹಿಂಸೆ (ವಚನಗಳು 16-18, 21, 22, 34-36)

''ಕ್ರಿಸ್ತನ ರಾಯಭಾರಿಗಳಾದವರು'' ಹಿಂಸೆಯನ್ನು ಹೊಂದುತ್ತಾರೆ. ಯೇಸು ತನ್ನ ಶಿಷ್ಯರಿಗೆ, ''ನೋಡಿರಿ, ತೋಳಗಳ ನಡುವೆ ಕುರಿಗಳನ್ನು ಹೋಗಿಸಿದಂತೆ ನಾನು ನಿಮ್ಮನ್ನು ಕಳುಹಿಸಿ ಕೊಡುತ್ತೇನೆ'' (ವಚನ 16ಎ). ಯೇಸು ಅರಸರ ಅರಸನಾಗಿದ್ದಾಗ್ಯೂ, ಈ ಸಮಚಾರವು ವಿಚಿತ್ರವೆನಿಸಬಹುದು, ಅಂಥಹ ಒಂದು ಶಕ್ತಿಗೆ ದೇವ ಮಕ್ಕಳು ವಿರೋಧವಾಗಿದ್ದರು ಎಂದು ಇತಿಹಾಸ ಹೇಳುತ್ತದೆ. ಅವರು ಆತನನ್ನು ಹಿಂಸಿಸಿರುವಾಗ (ವಚನ 25), ಆತನ ಅನುಯಾಯಿಗಳನ್ನು ಹಿಂಸಿಸಲಾರರೆ (ವಚನ 24)?

ಈ ಅಧ್ಯಾಯನದಲ್ಲಿ ಮೂರು ವಿಧವಾದ ಹಿಂಸೆಗಳಿವೆ. ಧಾರ್ಮಿಕ ಸಂಘಟನೆಗಳಿಂದ ಮೊದಲನೆಯ ಹಿಂಸೆ ಉಂಟಾಯಿತು: ''ಇದಲ್ಲದೆ ಜನರ ವಿಷಯದಲ್ಲಿ ಎಚ್ಚರಿಕೆಯಾಗಿರ್ರಿ; ಅವರು ನಿಮ್ಮನ್ನು ನ್ಯಾಯ ವಿಚಾರಣೆಯ ಸಭೆಗಳಿಗೆ ಎಳಕೊಂಡು ಹೋಗುವರು; ತಮ್ಮ ಸಭಾಮಂದಿರಗಳಲ್ಲಿ ನಿಮ್ಮನ್ನು ಕೊರಡೆಗಳಿಂದ ಹೊಡೆಯುವರು'' (ವಚನ 17). ಇಂಥಹ ವಿಧವಾದ ಉಂಟಾಗಿರುವ ಹಿಂಸೆಯ ಅನುಭವವನ್ನು ಪ್ರಪಂಚದ ಕೆಲವು ಭಾಗಗಳಲ್ಲಿ ಕೆಲವರು ಅನುಭವಿಸಿದ್ದಾರೆ.

ಎರಡನೆಯದಾಗಿ, ಅವರು ಆಡಳಿತದ ಅಧಿಕಾರಿಗಳಿಂದ ಹಿಂಸೆಗೆ ಒಳಗಾದರು. ನನ್ನ ನಿಮಿತ್ತವಾಗಿ: ''ನಿಮ್ಮನ್ನು ಅಧಿಪತಿಗಳ ಮುಂದಕ್ಕೂ ಅರಸುಗಳ ಮುಂದಕ್ಕೂ ತೆಗೆದುಕೊಂಡು ಹೋಗುವರು'' (ವಚನ 18ಎ). ತಕ್ಷಣಕ್ಕೆ, ಪೌಲನ ಹಾಗೂ ಇತರರ ರಕ್ತ ಸಾಕ್ಷಿಗಳ ನೆನಪು ಉಂಟಾಗುತ್ತದೆ ಈಗಿನ ಕಾಲದಲ್ಲೂ ಸಹ ನಮ್ಮ ಅನೇಕ ಸಹೋದರರು ಹಿಂಸೆಗೆ ಒಳಗಾಗುತ್ತಿದ್ದಾರೆ.[12]

ಮೂರನೆಯದಾಗಿ, ಬಯಸದೆ ಇರುವ ಮೂಲಗಳಿಂದ ಹಿಂಸೆ ಉಂಟಾಗುತ್ತದೆ.[13]

> ಇದಲ್ಲದೆ ಅಣ್ಣನು ತಮ್ಮನನ್ನು, ತಂದೆಯು ಮಗನನ್ನು, ಮರಣಕ್ಕೆ ಒಪ್ಪಿಸುವರು; ಮಕ್ಕಳು ಹೆತ್ತವರ ಮೇಲೆ ತಿರುಗಿಬಿದ್ದು ಅವರನ್ನು ಕೊಲ್ಲಿಸುವರು (ವಚನ 21).
>
> ಭೂಲೋಕದ ಮೇಲೆ ಸಮಾಧಾನ ಹುಟ್ಟಿಸುವದಕ್ಕೆ ಬಂದೆನೆಂದು ನೆನಸಬೇಡಿರಿ; ಸಮಾಧಾನವನ್ನು ಹುಟ್ಟಿಸುವದಕ್ಕೆ ನಾನು ಬಂದಿಲ್ಲ, ಖಡ್ಗವನ್ನು ಹಾಕುವದಕ್ಕೆ ಬಂದೆನು. ಹೇಗಂದರೆ ಮಗನಿಗೂ ತಂದೆಗೂ, ಮಗಳಿಗೂ ತಾಯಿಗೂ, ಸೊಸೆಗೂ ಅತ್ತೆಗೂ ಭೇದ ಹುಟ್ಟಿಸುವದಕ್ಕೆ ಬಂದೆನು. ಹೀಗೆ ಒಬ್ಬ ಮನುಷ್ಯನಿಗೆ ಅವನ ಮನೆಯವರೇ ವೈರಿಗಳಾಗುವರು (ವಚನಗಳು 34-36).

ಯೇಸು ತನ್ನ ಶಿಷ್ಯರಿಗೆ: "ನನ್ನ ಹೆಸರಿನ ನಿಮಿತ್ತ ನಿಮ್ಮನ್ನು ಎಲ್ಲರೂ ಹಗೆ ಮಾಡುವರು" (ವಚನ 22ಎ). ಯೇಸು ಅವರಿಗೆ ಯಥಾರ್ಥವಾಗಿ ಈ ಮಾತನ್ನು ಹೇಳಿದರು. ಕೆಲಸದ ನಿಯಮಾವಳಿಗಳನ್ನು ತಿಳಿಸಿದ ಮೇಲೆ, "ಈ ಕೆಲಸವನ್ನು ಮಾಡುವಿರಾ?"

ಹಿಂಸೆಯ ಬಗ್ಗೆ ಹೊಸ ಒಡಂಬಡಿಕೆಯು ಇಷ್ಟೊಂದು ಹೇಳುತ್ತಿರುವಲ್ಲಿ ನಾವೇಕೆ ಅಲ್ಪವಾಗಿ ಹೇಳುತ್ತಿದ್ದೇವೆ?[14] ಆದಿ ಸಭೆಯವರು ಒಟ್ಟಾಗಿ ಸೇರಿಬರುವಾಗ, ಕರ್ತನಿಗಾಗಿ ಅವರು ಅನೇಕ ಅಪಾಯಗಳನ್ನು ಎದುರಿಸಬೇಕಾಯಿತು. ನಮ್ಮಲ್ಲಿ ಕೆಲವರು ಬಹಳ ಒತ್ತಡದಲ್ಲಿದ್ದೇವೆ. ಬಹಳ ಥಂಡಿ, ಬಹಳ ಸೆಕ್ಕೆ, ಮತ್ತು ಅಧಿಕ ಆಯಾಸವಾಗಿದೆ ಎಂದು ಹೇಳುತ್ತಿದ್ದೇವೆ. "ನಾವುಗಳು ಕೊರತೆಗಳನ್ನು ಹೇಳುವಾಗ, ಅವರುಗಳು ಹಿಂಸೆ ಅನುಭವಿಸುತ್ತಿದ್ದಾರೆ. ಏಕಾಂಗಿಯಾಗಿ ಶಿಲುಬೆಯನ್ನು ಹೊರಬೇಕಲ್ಲವೇ?"

### ಸಂಪನ್ಮೂಲವನ್ನು ಬಯಸುವದೇ (ವಚನಗಳು 26-31)

ಮತ್ತಾಯ 10ರಲ್ಲಿರುವ ಯೇಸುವಿನ ಮಾತುಗಳು ನಕಾರಾತ್ಮಕವಾಗಿದೆ ಎಂದು ಹೇಳಲು ಬಯಸುತ್ತೇನೆ. ಇಲ್ಲಿ ನಾಣ್ಯದ ಇನ್ನೊಂದು ಮುಖವನ್ನು ನೋಡುತ್ತೇವೆ. ನಾವುಗಳು "ರಾಯಭಾರಿಗಳಾಗಿರುವದರಿಂದ" ಅರಸನ ಶಕ್ತಿಯನ್ನು ಬಳಸಬಹುದಾಗಿದೆ.

ಈ ಅಧ್ಯಾಯದಲ್ಲಿ, "ಭಯಪಡಬೇಡ" ಎಂದು ಮೂರು ಬಾರಿ ಹೇಳಲಾಗಿದೆ. ಹಿಂಸೆಗೊಳಗಾಗುವಾಗ "ಭಯುಡಬೇಡಿರಿ" ಅಂತ್ಯದಲ್ಲಿ ಸತ್ಯಕ್ಕೆ ಜಯವಿರುತ್ತದೆ: "ಮರೆಯಾಗಿರುವ ಯಾವದೂ ವ್ಯಕ್ತವಾಗದೆ ಇರುವದಿಲ್ಲ, ಹೊರಪಡದ ರಹಸ್ಯವೂ ಇಲ್ಲ" (ವಚನ 26). "ಮಾಳಿಗೆಗಳ ಮೇಲೆ ನಿಂತು ಸಾರಿರಿ" (ವಚನ 27).[15]

ನಿಮಗೆ ಹಿಂಸೆಯಾಗುವಾಗ, ಭಯಪಡಬೇಡಿ, ಮನುಷ್ಯನು ದೇಹವನ್ನು ಕೊಲ್ಲಬಹುದು: "ಇದಲ್ಲದೆ ದೇಹವನ್ನು ಕೊಂದು ಆತ್ಮ ದೇಹ ಎರಡನ್ನು ಕೂಡ ನರಕಲ್ಲಿ ಹಾಕಿ ನಾಶಮಾಡಬಲ್ಲಾತನಿಗೆ ಹೆದರಿರಿ" (ವಚನ 28). ಒಬ್ಬರು ಬರೆದಿರುವ ಹಾಗೆ ಆತನ ಸೇವಕರೇ ಆತನಿಗೆ ಹೆದರಿರಿ, ಆ ನಂತರ ಬೇರೆ ಯಾವದಕ್ಕೂ ನೀವು ಹೆದರುವ ಅಗತ್ಯವಿರುವದಿಲ್ಲ. ಜಾನ್ ಕಾಕ್ಸ್ ದೇಹದ ಸಮಾಧಿಯ ಮೇಲೆ, "ದೇವರಿಗೆ ಭಯಪಟ್ಟು, ಯಾವ ಮನುಷ್ಯನಿಗೂ ಭಯಪಡದ ವ್ಯಕ್ತಿ"[16] ಎಂದು ಬರೆಯಲಾಗಿತ್ತು.

ಭಯಪಡಬೇಡ, ಯಾಕಂದರೆ ಸರ್ವಶಕ್ತನಾದ ದೇವರು ನಿನ್ನೊಂದಿಗಿದ್ದಾನೆ!

> ದುಡ್ಡಿಗೆ ಎರಡು ಗುಬ್ಬಿಗಳನ್ನು ಮಾರುವ ದುಂಟಲ್ಲಾ;[17] ಆದರೂ ನಿಮ್ಮ ತಂದೆಯ ಚಿತ್ತವಿಲ್ಲದೆ ಒಂದಾದರೂ ನೆಲಕ್ಕೆ ಬೀಳದು. ನಿಮ್ಮ ತಲೇಕೂದಲೂಗಳು ಸಹ ಎಲ್ಲವೂ ಎಣಿಕೆಯಾಗಿವೆ. ಆದದರಿಂದ ಹೆದರಬೇಡಿರಿ; ಬಹಳ ಗುಬ್ಬಿಗಳಿಗಿಂತ ನೀವು ಹೆಚ್ಚಿನವರು (ವಚನಗಳು 29-31).

## ಮುಕ್ತಾಯ

ಅಪೊಸ್ತಲರಿಗಾಗಿ ಹಾಗೂ ನಮಗಾಗಿ ಯೇಸು ನೀಡಿರುವ ಸವಾಲಿನ ಕುರಿತ ವಚನ

39ರಲ್ಲಿ ತನ್ನ ಪ್ರಾಣವನ್ನು ಕಂಡುಕೊಂಡವನು ಅದನ್ನು ಕಳಕೊಳ್ಳುವನು: "ನನ್ನ ... ನಿಮಿತ್ತವಾಗಿ ತನ್ನ ಪ್ರಾಣವನ್ನು ಕಳಕೊಂಡವನು ಅದನ್ನು ಕಂಡುಕೊಳ್ಳುವನು" ಎಂಬ ಸಾರಾಂಶವನ್ನು ನೀಡಲಾಗಿದೆ. ಆದಿಯಲ್ಲಿ ರಕ್ತಸಾಕ್ಷಿಗಳಾದವರು, "ನನ್ನ ನಿಮಿತ್ತವಾಗಿ ಕಳಕೊಂಡವನು ಅದನ್ನು ಕಂಡುಕೊಳ್ಳುವನು" ಎಂಬ ಮಾತನ್ನು ಅಲಿಕೆ ಮಾಡುತ್ತಾ ಪ್ರಾಣಬಿಟ್ಟರು ಎಂದು ಆದಿ ಬರಹಗಾರರು ತಿಳಿಸಿರುವರು.

ಮತ್ತಾಯ 10:39 ಕೇವಲ ರಕ್ತಸಾಕ್ಷಿಗಳ ಅಧ್ಯಾಯವು ಮಾತ್ರವಲ್ಲ. ಕರ್ತನ ವಾಗ್ದಾನಗಳ ಪುನರುಚ್ಚರಣೆಯ ಹೊಸ ಒಡಂಬಡಿಕೆಯಲ್ಲಿವೆ. ಹೊಸ ಒಡಂಬಡಿಕೆಯ ಆರು ಸಲ ಈ ಹೇಳಿಕೆಯನ್ನು ಹೇಳಲಾಗಿದೆ (ಇತರೆ ಐದು ಸಲ ಮತ್ತಾಯ 16:25; ಮಾರ್ಕ 8:35; ಲೂಕ 9:24; 17:33; ಯೋಹಾನ 12:25ರಲ್ಲಿ ಕಾಣಬಹುದು). ಆತನ ಸೇವೆಯಲ್ಲಿ ನಮ್ಮ ಪ್ರಾಣವನ್ನು ಕಳಕೊಳ್ಳುವ ವಿಚಾರ ನಾವು ಅರಿಯಬೇಕು ಎಂದು ಆತನು ಬಯಸುತ್ತಾನೆ. "ತನ್ನ ಪ್ರಾಣವನ್ನು ಕಂಡುಕೊಂಡವನು ಅದನ್ನು ಕಳಕೊಳ್ಳುನು; ನನ್ನ ನಿಮಿತ್ತವಾಗಿ ತನ್ನ ಪ್ರಾಣವನ್ನು ಕಳಕೊಂಡನು ಅದನ್ನು ಕಂಡು ಕೊಳ್ಳುವನು."

ನಿನ್ನ ಜೀವಿತವನ್ನು ನಿನಗಾಗಿ ಮೀಸಲಿಟ್ಟು, ನಿನ್ನ ಕರೆಯನ್ನು ಸಮರ್ಪಣೆಯನ್ನು ಅಲಕ್ಷ್ಯ ಮಾಡಿದರೆ, ನಿನ್ನ ಆತ್ಮವನ್ನು ಕಳಕೊಳ್ಳುತ್ತಿ. ನಿನ್ನ ಜೀವಿತದೊಂದಿಗೆ *ಏನು ಮಾಡಿತ್ತಿ?* ಈ ದಿನವೇ ನಿರ್ಧರಿಸು.[18]

---

ಟಿಪ್ಪಣಿಗಳು

[1]*ಕ್ರಿಸ್ತನ ಜೀವನ ಚರಿತ್ರೆ, 1ನೇ* ಪುಸ್ತಕದಲ್ಲಿ "ನಾಲ್ಕು ಸುವಾರ್ತೆಗಳ ವರ್ಣನೆ," ಮತ್ತು "ಮತ್ತಾಯನ ಪುಸ್ತಕ" ಎಂಬ ಪಾಠಗಳನ್ನು ನೋಡಿ. [2]*ಕ್ರಿಸ್ತನ ಜೀವನ ಚರಿತ್ರೆ, 2ನೇ* ಪುಸ್ತಕದಲ್ಲಿ ಅಪೊಸ್ತಲರ ನೇಮಕವನ್ನು "ಕೂಡಿಕೊಳ್ಳುತ್ತಿರುವ ಬಿರುಗಾಳಿ" ಎಂಬ ಪಾಠದಲ್ಲಿ ನೋಡಿ. [3]ಎಫೆಸ 6:20ರಲ್ಲಿ "ಸರಪಣಿ"ಯಲ್ಲಿರುವ ರಾಯಭಾರಿ ಎಂದು ಪೌಲನು ತನ್ನ ಬಗ್ಗೆ ಹೇಳಿರುವನು "ರಾಯ ಭಾರಿ" ಅಂದರೆ ಹಳೆ ನಿಯಮದ ಪ್ರಕಾರ ಒಬ್ಬ ರಾಯಭಾರಿ ವಯಸ್ಸಾಗಿರುತ್ತಾನೆ. ಫಿಲೋಮೋನ ನಿಲ್ಲಿರು "ವೃದ್ಧ" ಎಂಬ ಪದವನ್ನು "ರಾಯಭಾರಿ" ಎಂದು ಕರೆಯಬಹುದಾಗಿತ್ತು. ಪೌಲನಂತೆ ಇತರೆ ಅಪೊಸ್ತಲರು ಸಹ ರಾಯಭಾರಿಗಳಾಗಿದ್ದರು. ಮತ್ತಾಯ 10ರಲ್ಲಿ, ಅವರು ಯೇಸುವಿನ ಪ್ರತಿನಿದಿಗಳು ಕಳುಹಿಸಿದವನು ಸೇವೆ ಮಾಡಬೇಕು. [4]ಈ ಹಿಂದಿನ ಪಾಠದಲ್ಲಿ ಇದರ ಮಾಹಿತಿನೀಡಲಾಗಿದೆ. [5]*ಕ್ರಿಸ್ತನ ಜೀವನ ಚರಿತ್ರೆ, 1ನೇ* "ಮತಾವಲಂಭಿಗಳ ಕುರಿತು" "ಕ್ರಿಸ್ತನು ಆಗಮಿಸಿದ ಲೋಕ" ಎಂಬ ಪಾಠದಲ್ಲಿ ಹೇಳಲಾಗಿದೆ. [6]James Burton Coffman, *Commentary on Matthew* (Austin, Tex.: Firm Foundation Publishing House, 1968), 137. [7]ಅಪೊಸ್ತಲರು ನೀಡಿರುವ ಮಾಹಿತಿಗಿಂತಲೂ, ಯೇಸುವಿನ ಉಪದೇಶಗಳು ಬಲವುಳ್ಳವಾಗಿದ್ದವು ಎಂದು ಹಲವರು ಎನ್ನುತ್ತಾರೆ. ನೋಡಿ ಯೋಹಾನ 13:20. ಅಪೊಸ್ತಲರ ಬೋಧನೆಯನ್ನು ಯೇಸುವಿನ ಬೋಧನೆಯಂತೆಯೇ ಸ್ವೀಕರಿಸಬೇಕು ಎಂದು ಮತ್ತಾಯ 10:42; ಯೋಹಾನ 13:20 ಹೇಳುತ್ತವೆ. ಅಪೊಸ್ತಲರನ್ನು ಸ್ವಿಕರಿಸಿದರೆ ಕ್ರಿಸ್ತನನ್ನು ಸ್ವಿಕರಿಸಿದಂತೆಯೇ. ಮತ್ತೊಂದು ಮಾತಿನಲ್ಲಿ, ಅವರನ್ನು (ಅವರ ಉಪದೇಶವನ್ನು) ತಿರಸ್ಕರಿಸಿದರೇ ಯೇಸುವನ್ನೇ ತಿರಸ್ಕರಿಸಿದಂತೆ. [8]William Barclay, *The Gospel of Matthew,* vol. 1, rev. ed., The Daily Bible Study Series (Philadelphia: Westminster Press, 1975), 361. [9]Ibid., 392. [10]ಅಮೇರಿಕೆಯ ಗುಪ್ತದಳದ ಸೇವೆಯವರು, ಅಧ್ಯಕ್ಷರು ಕಾವಲುಗಾರರು.

[11]ಮತ್ತಾಯ 10:30ರ ಮೇಲಿನ ಕ್ಲುಪ್ತವಾದ ಚರ್ಚೆಯನ್ನು ಮತ್ತು ಅದರ ಪ್ರಭಾವವನ್ನು "ನಮ್ಮ ಎರಡು ಕುಟುಂಬಗಳು" ಎಂಬ ಪಾಠವನ್ನು *ಕ್ರಿಸ್ತನ ಜೀವನ ಚರಿತ್ರೆ, 2ನೇ* ಪುಸ್ತಕದಲ್ಲಿ ನೋಡಿ. [12]ಅಮೇರಿಕೆಯಲ್ಲಿ ಹಿಂಸೆ ಇರುವದಿಲ್ಲ. [13]34-36 ವಚನಗಳ ಮೇಲಿನ ಚರ್ಚೆಗಾಗಿ "ನಮ್ಮ ಎರಡು ಕುಟುಂಬಗಳು" ಎಂಬ ಪಾಠವನ್ನು *ಕ್ರಿಸ್ತನ ಜೀವನ ಚರಿತ್ರೆ, 2ನೇ* ಪುಸ್ತಕದಲ್ಲಿ ನೋಡಿ. [14]ನೋಡಿ ರೋಮಾಪುರ 8:14-17; ಪಿಲಿಪ್ಪಿಯವರಿಗೆ 1:27-30; 1 ಪೇತ್ರ 2:18-21; 5:8, 9; 2 ತಿಮೊಥೆ 3:10-12. [15]ಚರ್ಚ್ ಆಫ್ ಕ್ರೈಸ್ಟ್ ಚಪ್ಪಟಿಯ ಮೇಲ್ಛಾವಣಿ ಹೊಂದಿದ್ದು ಪ್ರಸಂಗಿಗಳು ಅದರ ಮೇಲೆ ನಿಂತು ಪ್ರಸಂಗಿಸುತ್ತಿದ್ದರು. [16]Barclay, 386. [17]ದುಗ್ಗಾಣಿ - ರೋಮಾಯರ ಚಿಕ್ಕ ಅಳತೆಯ ಕಾಸು.

[18]ಕರ್ತನ ಬಳಿಗೆ ಬರುವಂತೆ ಪ್ರೋತ್ಸಾಹಿಸಿ (ಮಾರ್ಕ 16:15, 16; ಅಪೊಸ್ತಲರ ಕೃತ್ಯಗಳು 2:37, 38). ಹಿಂಜಂದಿದ್ದರೆ, ಹಿಂದಿರುಗುವ ಕುರಿತು ತಿಳಿಸಿ (ಅಪೊಸ್ತಲರ ಕೃತ್ಯಗಳು 8:22; ಯಾಕೋಬ 5:16).